

ಪ್ರಜ್ಞಾವಂತರ್ಯಾರೂ ಆ ವಿಷಯವನ್ನು ಡಂಗೂರ ಸಾರೋಲ್ಲ'. ರಾಜೇಶನ ಮಾತಿಗೆ ಕರುಣಾಕರ ತುಟಿಯಂಚಿನಲ್ಲೇ ನಕ್ಕು, 'ಬಾಯಲ್ಲಿ ಹೇಳೋದಿಕ್ಕೆ ಸುಲಭ. ನಿನಗೊಂದು ಸಲ ಆ ಪರಿಸ್ಥಿತಿ ಬರಲಿ ಗೊತ್ತಾಗುತ್ತೆ' ನುಡಿದನು.

'ಪರಿಸ್ಥಿತಿ ಬಂದಾಗಿದೆ. ಎದುರಿಸುವ ಕಷ್ಟ ಏನೇನಿದೆ ಅನ್ನುವುದು ಅರ್ಥ ಆಗಿದೆ. ಹಾಗಂತ ಮರೆಮಾಚುವ ಹಾಗಿಲ್ಲ. ಇನ್ನೊಬ್ಬರ ಬದುಕಿಗೆ ಮುಳುವಾಗುವಂತ ನಿರ್ಧಾರವನ್ನು ಖಂಡಿತಾ ತೆಗೆದುಕೊಳ್ಳುವುದಿಲ್ಲ ಎನ್ನುವ ಸಂಕಲ್ಪವನ್ನೂ ಕೂಡಾ ಮಾಡಿಕೊಂಡಿದ್ದೇನೆ. ಒಟ್ಟಿನಲ್ಲಿ ನಾನು ನಾನಾಗಿಯೇ ಬದುಕಬೇಕು ಅನ್ನೋ ನಿರ್ಧಾರವನ್ನು ಗಟ್ಟಿಗೊಳಿಸಿದ್ದೇನೆ' ಎಂದ ರಾಜೇಶ, ನಿಧಾನಕ್ಕೆ ಗೆಳೆಯನ ಹೆಗಲು ತಟ್ಟುತ್ತಾ,

'ನನ್ನ ಮನಸ್ಸಿಗೇನನಿಸಿತೋ ಅದನ್ನು ನಾನು ಮುಕ್ತವಾಗಿ ಮಾತನಾಡಿದ್ದೇನೆ. ನಿನಗೆ ನನ್ನ ಮಾತಿನಿಂದೇನಾದ್ರು ಬೇಸರವಾಗಿದ್ರೆ ಸಾರಿ... ಅಷ್ಟಕ್ಕೂ ನೀನು ನನ್ನ ಮಾತುಗಳನ್ನೇ ಗಂಭೀರವಾಗಿ ಪರಿಗಣಿಸಿ ಅದರಂತೆಯೇ ನಡೆಯಬೇಕೆಂದಲ್ಲ. ಈ ಮಾತಿನ ಚರ್ಚೆಯಿಂದ ಮುಂದಿನ ಬದುಕಿನ ನಿರ್ಧಾರವನ್ನು ತಳೆಯುವುದು ನಿನಗೆ ಸುಲಭವಾಗಬಹುದೂಂತ ಅಷ್ಟೇ... ನಿನ್ನ ಬದುಕು ನಿನ್ನದು. ಅದನ್ನು ನೀನಂದುಕೊಂಡಂತೆ ಬದುಕುವ ಎಲ್ಲಾ ರೀತಿಯ ಹಕ್ಕೂ ನಿನಗಿದೆ' ಎಂದ ರಾಜೇಶ ಮೊಬೈಲ್ ತೆಗೆದು ಸಮಯ ನೋಡಿಕೊಂಡವನು, 'ಗಂಟೆ ಆಗ್ಲೇ ಏಳು ನಲವತ್ತು ದಾಟಿತು. ಮನೆಗೆ ಹೋಗಿ ನಾಟಕದ ಬ್ಯಾಗ್ ಪ್ಯಾಕ್ ಮಾಡ್ಕೊಂಡು ಹೊರಡುವಷ್ಟರಲ್ಲಿ ತಡವಾಗುತ್ತೆ. ಸದ್ಯದಲ್ಲೇ ಮತ್ತೊಮ್ಮೆ ಭೇಟಿಯಾಗೋಣ. ಬರ್ತೀನಿ' ಎಂದವನು ಸಹಜವಾದೊಂದು ಮುಗುಳ್ನಗೆಯೊಂದಿಗೆ ಗೆಳೆಯನ ಕೈ ಕುಲುಕಿ ಅಲ್ಲಿಂದ ಸರಿದು ಗೊಮ್ಮಟಬೆಟ್ಟವನ್ನು ಇಳಿಯಲಾರಂಭಿಸಿದನು.